# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 26.09.2011**

## *ರಿಲಾಯನ್ಸ್ ಕಮ್ಯೂನಿಕೇಷನ್ಸ್ ಸಂಸ್ಥೆಗೆ ರೂ.30 ಲಕ್ಷ ದಂಡ*

ದಿನಾಂಕ: 18.09.2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಬರುವ ಮಾರತ್‌ಹಳ್ಳಿ ವಾರ್ಡ್ ನಂ.86ರ ಯಮಲೂರು ಗ್ರಾಮದ ಮುಖ್ಯರಸ್ತೆಯಲ್ಲಿ ಮುನೇಶ್ವರ ದೇವಸ್ಥಾನದ ರಾಜು ಕಾಲೋನಿಯವರೆಗೆ 300 ಮೀಟರ್ ಅಂತರದಲ್ಲಿ ಅನಧಿಕೃತವಾಗಿ 3 ಸ್ಥಳಗಳಲ್ಲಿ ರಸ್ತೆ ಅಗೆಯುತ್ತಿರುವುದನ್ನು ಪಾಲಿಕೆ ಸಿಬ್ಬಂದಿ ಗಮನಿಸಿ, ಕೆ.ಎ-18-ಟಿ-3522 ವಾಹನವನ್ನು ಜಪ್ತಿ ಮಾಡಿರುತ್ತಾರೆ. ಸದರಿ ರಸ್ತೆ ಅಗೆತ ಕೆಲಸವನ್ನು ರಿಲಾಯನ್ಸ್ ಕಮ್ಯೂನಿಕೇಷನ್, ವೈಟ್‌ಫೀಲ್ಡ್ ಬೆಂಗಳೂರು ರವರ ಸಂಪರ್ಕ ತಂತಿ ಲಾಜಿಕಾ ಸಂಸ್ಥೆಗೆ ಸಂಪರ್ಕವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಮಾನ್ಯ ಆಯುಕ್ತರ ಆದೇಶದಂತೆ, ರಿಲಾಯನ್ಸ್ ಕಮ್ಯೂನಿಕೇಷನ್, ವೈಟ್‌ಫೀಲ್ಡ್, ಬೆಂಗಳೂರು-66 ರವರು ಅನಧಿಕೃತವಾಗಿ ರಸ್ತೆ ಅಗೆತ ಮಾಡಿರುವುದರಿಂದ ರೂ.30.00 ಲಕ್ಷಗಳ ದಂಡ ವಿಧಿಸಲಾಗಿದೆ ಎಂದು ಜಂಟಿ ಆಯುಕ್ತರು (ಮಹದೇವಪುರ) ವಲಯ ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 26.09.2011**

## *ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದ ಮಾಲೀಕರ ಮನೆ ಎದುರುಗಡೆ ತಮಟೆ ಬಾರಿಸುವ ಕಾರ್ಯಕ್ರಮ*

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಆಸ್ತಿ ತೆರಿಗೆ ಬಾಕಿ ಇರುವ ತೆರಿಗೆದಾರರಿಗೆ ನೋಟಿಸ್‌ಗಳನ್ನು ಜಾರಿ ಮಾಡಿ ದಂಡ ಸಮೇತ ವಸೂಲಿ ಮಾಡಲು ಕಾರ್ಯಕ್ರಮಗಳನ್ನು ರೂಪಿಸಿ ಅಗತ್ಯವಿದ್ದಲ್ಲಿ ಜಪ್ತಿ ವಾರಂಟ್‌ಗಳನ್ನು ಜಾರಿ ಮಾಡಿ ತೆರಿಗೆ ವಸೂಲಿ ಮಾಡಲು ವಲಯ ಜಂಟಿ ಆಯುಕ್ತರು ಹಾಗೂ ಉಪ ಆಯುಕ್ತರುಗಳಿಗೆ ಆದೇಶಿಸಿರುತ್ತಾರೆ.

ಇಂದು ತಮಟೆ ಹೊಡೆಯುವ ಕಾರ್ಯಕ್ರಮವನ್ನು ಮುಂದುವರೆಸಿ, ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.54 ರಲ್ಲಿನ "UMIYA SUNTECH" ನಂ.58, ಸಾದರ ಮಂಗಲ ಕೈಗಾರಿಕಾ ಪ್ರದೇಶ, ವೈಟ್‌ಫೀಲ್ಡ್ ಮುಖ್ಯರಸ್ತೆ, ಬೆಂಗಳೂರು ರವರು ರೂ.51,13,454/- ರೂ.ಗಳಷ್ಟು ಆಸ್ತಿ ತೆರಿಗೆಯನ್ನು ಪಾವತಿಸಿದೇ ಬಾಕಿ ಉಳಿಸಿಕೊಂಡಿದ್ದರಿಂದ ದಿನಾಂಕ: 26.09.2011 ರಂದು ಸಹ ಕಂದಾಯ ಅಧಿಕಾರಿಯಾದ ಶ್ರೀ ಗಂಗಬೋರಯ್ಯ ಮತ್ತು ಪಾಲಿಕೆ ಸಿಬ್ಬಂದಿಯ ಸಹಯೋಗದೊಂದಿಗೆ ಕಟ್ಟಡದ ಎದುರುಗಡೆ ತಮಟೆ ಹೊಡೆಯುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಆಸ್ತಿ ಮಾಲೀಕರು ಒಂದು ವಾರದ ಒಳಗಾಗಿ ತೆರಿಗೆ ಪಾವತಿಸುವುದಾಗಿ ಒಪ್ಪಿಕೊಂಡಿರುತ್ತಾರೆ.

ಬಾಕಿ ಉಳಿಸಿಕೊಂಡಿರುವ ಆಸ್ತಿ ತೆರಿಗೆಯನ್ನು ಪಾವತಿಸಲು ಆಸ್ತಿ ಮಾಲೀಕರಿಗೆ ಸಾಕಷ್ಟು ಕಾಲಾವಕಾಶ ನೀಡಲಾಗಿದೆ. ಆದರೂ ಕೆಲವರು ತೆರಿಗೆ ಪಾವತಿಸದೇ ಬಾಕಿ ಉಳಿಸಿಕೊಂಡಿದ್ದಾರೆ. ಅಂತಹವರ ವಿರುದ್ಧ ಜಪ್ತಿ ವಾರಂಟ್ ಜಾರಿ ಮಾಡುವುದರ ಜೊತೆಗೆ ಅವರ ಮನೆ ಎದುರು ತಮಟೆ ಹೊಡೆಯುವ ಕಾರ್ಯ ಮುಂದುವರೆಸಲಾಗುವುದೆಂದು ಆಯುಕ್ತರು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದ ಮಾಲೀಕರಿಗೆ ಎಚ್ಚರಿಕೆ ನೀಡಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 26.09.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.113ರ ಕೋನೇನಾ ಅಗ್ರಹಾರ ವ್ಯಾಪ್ತಿಯ ಹೆಚ್.ಎ.ಎಲ್. ವಿಮಾನ ನಿಲ್ದಾಣ ರಸ್ತೆಯಲ್ಲಿ ದಿನಾಂಕ: 14.09.2011 ರಂದು ಮಣಿಪಾಲ್ ಆಸ್ಪತ್ರೆ ಹತ್ತಿರ ಹಾಗೂ 23.09.2011 ರಂದು ಲೀಲಾ ಪ್ಯಾಲೇಸ್ ಹತ್ತಿರ ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಜೀವನಭೀಮಾನಗರ) ಉಪ ವಿಭಾಗರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 26.09.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯದ ಜಂಟಿ ಆಯುಕ್ತರು (ಪಶ್ಚಿಮ) ರವರ ಹುದ್ದೆಯ ಕಾರ್ಯಭಾರವನ್ನು ಶ್ರೀ ಶಂಕರ್ ಪಾಟೀಲ್, ಕೆ.ಎ.ಎಸ್., ರವರು ದಿನಾಂಕ: 19.09.2011 ರಿಂದ ವಹಿಸಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ. ಸದರಿಯವರ ಮೊಬೈಲ್: 9480685385, ಕಛೇರಿ ದೂರವಾಣಿ ಸಂಖ್ಯೆ: 22975601 / 648, ಫ್ಯಾಕ್ಸ್ ಸಂಖ್ಯೆ: 22975648 ಹಾಗೂ ಇ-ಮೇಲ್: report.jcwest@rediffmail.com ಸಂಪರ್ಕಿಸಲು ಸಾರ್ವಜನಿಕರಲ್ಲಿ ಕೋರಲಾಗಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**